**ದಿನಾಂಕ : *26-09-2025* ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ *2* ನೇ ಎದರುದಾರರ ಪರವಾಗಿ ಶ್ರೀ. ಆರ್ ಪಿ ಕೆ . ವಕೀಲರಿಂದ,**

ನಾನು ಈ ದಿನ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇದ್ದು, ನಾನೇ ಹೇಳಿ ಬರೆಸಿದ್ದು, ಅದರಲ್ಲಿನ ಸಹಿಗಳು ನನ್ನದೇ ಇರುತ್ತವೆ.

ನಾನು ಈ ಕೆಳಕಂಡ ದಾಖಲೆಗಳನ್ನು ಗುರುತಿಸುತ್ತೇನೆ.

ನಿಆರ್ -1ಃ ಅಧಿಕಾರ ಪತ್ರ

ನಿಆರ್ -2ಃ ವಿಮಾ ಪತ್ರ

ಅರ್ಜಿಯನ್ನು ವಜಾಗೊಳಿಸಬೇಕೆಂದುಕೋರುತ್ತೇನೆ.

**ಪಾಟೀ ಸವಾಲು ಃ 4 ನೇ ಎದರುದಾರರ ಪರ ಶ್ರೀಮತಿ ಬಿ ಜಿ ಎಸ್ ವಕೀಲರಿಂದ**

ಟ್ಯಾಂಕರ ಚಾಲಕನನ್ನು 1 ನೇ ಆರೋಪಿಯನ್ನಾಗಿ ಮಾಡಿರುತ್ತಾರೆ ಎಂದರೆ ಸರಿ. ಟ್ಯಾಂಕರ ಚಾಲಕನು ತನ್ನ ವಾಹನವನ್ನು ಜೋರಾಗಿ ನಡೆಸಿದ್ದನು ಎಂದರೆ ಸರಿ. ಪರಿಹಾರದ ಹಣವನ್ನು ಕೊಡಲು ನಾವು ಭಾದ್ಯಸ್ತರು ಎಂದರೆ ಸರಿಯಲ್ಲ.

ಪಾಟೀ ಸವಾಲು ಃ 3 ನೇ ಎದರುದಾರರು ತಮ್ಮ ತಕರಾರನ್ನು ಸಲ್ಲಿಸದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲು ಃ 1 ನೇ ಎದುರುದಾರರು ಮತ್ತು ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಯಿತು. ಅವರು ಗೈರು ಹಾಜರಾಗಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಅರ್ಜಿದಾರರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿರುತ್ತಾರೆ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.